ಅನ್ನು ತಾವು ಯಾವ ರೀತಿಯಾಗಿ consider ಮಾಡುತ್ತೀರಿ? ಎಸ್ಟಿಮೇಟ್ ಕಾಸ್ಟ್ viable ಎಂಬುದನ್ನು ನೋಡುತ್ತೀರೋ ಅಥವಾ ಫ್ಯೂಚರ್ ಸಿಟಿ ಗ್ರೋತ್ ಬಗ್ಗೆ ನೋಡುತ್ತೀರೋ ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟ ಪಡಿಸಬೇಕಾಗುತ್ತದೆ.

ಶ್ರೀ ಧರ್ಮ್‌ಸಿಂಗ್ ನಾರಾಯಣಸಿಂಗ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತಹ ಪ್ರಶ್ನೆಗೆ ಈಗಾಗಲೇ ಉತ್ತರವನ್ನು ಒದಗಿಸಲಾಗಿದೆ. ಕೊಪ್ಪಳ ನಗರದ ವ್ಯಾಪ್ತಿಯಲ್ಲಿ ಬರತಕ್ಕಂತಹ ರಸ್ತೆ ಈಗಾಗಲೇ ಎಮ್‌ಆರ್‌ಟಿ ಮಂತ್ರಾಲಯಕ್ಕೆ ಕಳುಹಿಸಲಾಗಿದೆ. ಅದರ ಮನ್ನಣೆ ಪಡೆದ ನಂತರ ಕಾಮಗಾರಿ ಪ್ರಾರಂಭ ಮಾಡಲಾಗುತ್ತದೆ. ಗುತ್ತಿ ಅಂಕೋಲ ಏನಿದೆ ಇದು ಬಹಳ ದೊಡ್ಡದಾದ ನ್ಯಾಷನಲ್ ಹೈವೇ ಅದರಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 27 ಕಿ.ಮೀ. ಬರುತ್ತದೆ. ನಗರ ಪ್ರದೇಶಗಳಲ್ಲಿ 3.1 ಕಿ.ಮೀ. ಬರುತ್ತಿದೆ. ಇದಕ್ಕೆ ಕೂಡ ನಾವು ಕಳುಹಿಸಿದ್ದೇವೆ. ಬೈಪಾಸ್‌ಗೆ ಕೂಡ ನಾವು ಪರ್ಮಿಷನ್ ಕೇಳಿದ್ದೇವೆ. ಅಪ್ಪಣೆ ಕೊಟ್ಟ ಮೇಲೆ ಅದಷ್ಟು ಬೇಗ ನಾವು ಮಾಡುತ್ತೇವೆ. ನ್ಯಾಷನಲ್ ಹೈವೇ ಗೈಡ್‌ಲೈನ್ಸ್ ಏನಿದೆ, ನ್ಯಾಷನಲ್ ಹೈವೇಯಲ್ಲಿ ಎಷ್ಟು ಹಣ ನಾವು ಖರ್ಚು ಮಾಡುತ್ತಿದ್ದೇವೆ. ಅದರ ಆದೇಶದ ಪ್ರಕಾರ ಮಾಡುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಸಿಟಿ ಲಿಮಿಟ್‌ನಲ್ಲಿ ಎಷ್ಟು ವಿಡ್ತ್ ಮಾಡುತ್ತೀರಿ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕಾಗುತ್ತದೆ.

ಶ್ರೀ ಧರ್ಮ್‌ಸಿಂಗ್ ನಾರಾಯಣಸಿಂಗ್ :- ಅಂಕೋಲ ಗುತ್ತಿರಾಷ್ಟ್ರೀಯ ಹೆದ್ದಾರಿಯ ವಿಡ್ತ್ ಲಿಮಿಟ್ ಏನು ಇದೆ, ಅದೇ ಪ್ರಕಾರ ಸಿಟಿ ಲಿಮಿಟ್‌ನಲ್ಲಿ ಕೂಡ ಮಾಡುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಹೊರ ವಲಯದಲ್ಲಿ ಬೇರೆ ಇರುತ್ತದೆ. ಸಿಟಿ ಲಿಮಿಟ್‌ನಲ್ಲಿ ಬೇರೆ ಇರುತ್ತದೆ.

ಶ್ರೀ ಹೆಚ್.ಎಸ್. ಮಹಾದೇವಪ್ರಸಾದ್ :- ಟೌನ್ ವ್ಯಾಪ್ತಿಯಲ್ಲಿ ಬಿಲ್ಡಿಂಗ್‌ಗಳು ಬರುತ್ತವೆ. ಅಲ್ಲಿ ಏನಾದರೂ ವಿಡ್ತ್ ಕಡಿಮೆ ಮಾಡುತ್ತೀರೋ ಹೇಗೆ ಎಂದು ಹೇಳುತ್ತಿದ್ದಾರೆ.

ಶ್ರೀ ಧರ್ಮ್‌ಸಿಂಗ್ ನಾರಾಯಣಸಿಂಗ್ :- ಅವರು ಪ್ರತಿನಿಧಿಗಳಾಗಿ ಈ ಪ್ರಶ್ನೆ ಕೇಳುತ್ತಿದ್ದಾರೆ. ರಸ್ತೆ ಅಗಲೀಕರಣ ಆಗಬೇಕೆಂದು ಎಲ್ಲಾ ಜನರ ನಿರೀಕ್ಷೆ ಇದೆ. ಆ ನಂತರ ಎಲ್ಲಿಯಾದರೂ ಬಿಲ್ಡಿಂಗ್ ಹೋಗಬೇಕಾದರೆ ಅಲ್ಲಿಯೂ ಕೂಡ ಸಹಕಾರ ಮಾಡಬೇಕು. ಏಳು ಮೀಟರ್ ಅಗಲ ಇದೆ.

ವಿಷಯ :- ಪ್ರಶ್ನೆಗಳ ವರ್ಗಾವಣೆ ಬಗ್ಗೆ

ಅಧ್ಯಕ್ಷರು :- ಬಸವಂತರೆಡ್ಡಿಯವರೇ, ತಮ್ಮ ಪ್ರಶ್ನೆಯನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ವರ್ಗಾಯಿಸಲಾಗಿದೆ. ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ :- ಮಾನ್ಯ ಅಧ್ಯಕ್ಷರೇ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ವರ್ಗಾಯಿಸಿದರೆ ಹೇಗೆ ಗುರುಕುಂಟ ಸಿಸಿಎ ಕಾರ್ಖಾನೆ ಮುಚ್ಚಿರುತ್ತದೆ. ಅವರು ಅದನ್ನು ರಿಪೇರಿಯೇ ಮಾಡಿರುವುದಿಲ್ಲ. ಆ ಭಾಗದ ಜನತೆಗೆ ಸರ್ಕಾರ ಏನಾದರೂ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು :- ನಿಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ, ಅದನ್ನು ವರ್ಗಾಯಿಸಲಾಗಿದೆ. ಮುಂದಿನ ವಾರ ತೆಗೆದುಕೊಳ್ಳೋಣ. ಮಾನ್ಯ ಬಸವರಾಜ್‌ರವರೇ, ತಮ್ಮ ಪ್ರಶ್ನೆ ಗ್ರಾಮೀಣ ಅಭಿವೃದ್ಧಿಗೆ ವರ್ಗಾಯಿಸಲಾಗಿದೆ.

ಶ್ರೀ ಹೆಚ್.ಸಿ. ಬಸವರಾಜ್ :- ಮಾನ್ಯ ಅಧ್ಯಕ್ಷರೆ, ಕಾವೇರಿ ನದಿಗೆ ಅಡ್ಡಲಾಗಿ ಸೇತುವೆ ಕಟ್ಟುವ ವಿಷಯ ಆರ್‌ಡಿಪಿಆರ್ ಇಲಾಖೆಗೆ ಬರುವುದಿಲ್ಲ. ಅದು ಲೋಕೋಪಯೋಗಿ ಇಲಾಖೆಗೆ ಬರುತ್ತದೆ.

ಅಧ್ಯಕ್ಷರು :- ಅವರ ಇಲಾಖೆಯಿಂದ ಆರ್‌ಡಿಪಿಆರ್ ಇಲಾಖೆಗೆ ವರ್ಗಾಯಿಸಲಾಗಿದೆ ಎಂದು ನಮಗೆ ಉತ್ತರ ಬರೆದಿದ್ದಾರೆ.

ಶ್ರೀ ಹೆಚ್.ಸಿ. ಬಸವರಾಜ್ :- ದಯಮಾಡಿ ಆ ಪ್ರಶ್ನೆಯನ್ನು ಓದಿ.

ಅಧ್ಯಕ್ಷರು :- ಬೇಡ ಅವುಗಳನ್ನೆಲ್ಲಾ ಇಲ್ಲಿ ಓದಿಕೊಂಡು ಕೂತುಕೊಳ್ಳುವುದಕ್ಕಾಗುವುದಿಲ್ಲ. ನನ್ನ ಛೇಂಬರ್‌ಗೆ ಬನ್ನಿ ಈ ವಿಷಯ ಅಲ್ಲಿ ಚರ್ಚೆ ಮಾಡೋಣ. ಇಲ್ಲಿ ನಮ್ಮ ಸಮಯ ಹಾಳು ಮಾಡುವುದು ಬೇಡ.

ಶ್ರೀ ಹೆಚ್.ಸಿ. ಬಸವರಾಜ್ :- ನಮಗೆ ಸಿಗುವುದೇ ಒಂದು ಅವಕಾಶ. ಒಂದು ಅವಕಾಶ ಸಿಕ್ಕಾಗ ಅದೂ ಹೇಗಾದರೆ ಹೇಗೆ? ಈ ಅಸೆಂಬ್ಲಿ ಸಮಯದಲ್ಲಿ ಮೊದಲನೇ ಅವಕಾಶ ಸಿಕ್ಕಿದೆ.

ಶ್ರೀ ಎನ್. ಸಂಪಂಗಿ :- ಎಲ್ಲಾ ನಿಮ್ಮ ಛೇಂಬರ್‌ನಲ್ಲಿ ಮಾಡಿಕೊಳ್ಳುವುದಾದರೆ ಇಲ್ಲಿ ಪ್ರಶ್ನೆಗಳು ಏಕೆ ಕೇಳಬೇಕು? ತಾವು ಹೇಳಿ.

ಅಧ್ಯಕ್ಷರು :- ಇಲ್ಲಿ ಒಂದೊಂದು ನಿಮಿಷವೂ ನಮಗೆ ಬಹಳ ಮುಖ್ಯವಾಗಿದೆ.

ಶ್ರೀ ಹೆಚ್.ಸಿ. ಬಸವರಾಜ್ :- ಈ ಪ್ರಶ್ನೆ ಬಹಳ ಕ್ಲೀಯರಾಗಿ ಇದೆ. ಲೋಕೋಪಯೋಗಿ ಇಲಾಖೆಗೆ ಈ ಪ್ರಶ್ನೆ ಸೇರುತ್ತದೆ. ಆರ್‌ಡಿಪಿಆರ್ ಇಲಾಖೆಗೆ ಕಳುಹಿಸಿರುವುದು ಸರಿಯಲ್ಲ, ದಯಮಾಡಿ ತಾವು ಉತ್ತರ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಬಸವನ ಬಾಗೇವಾಡಿ ವಿಧಾನಸಭಾ ಕ್ಷೇತ್ರದ ದೇವಸ್ಥಾನಗಳನ್ನು ಪ್ರವಾಸಿ ತಾಣಗಳನ್ನಾಗಿ ಮಾಡುವ ಬಗ್ಗೆ

228 (1928) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಸ್ಥಳಗಳನ್ನು ಪ್ರವಾಸೋದ್ಯಮದ ಇಲಾಖೆಗೆ ಸೇರಿಸಲಾಗಿದೆ? (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

ಆ. ಈ ಪ್ರವಾಸಿ ತಾಣಗಳಿಂದ ಬರುವ ಆದಾಯ ಎಷ್ಟು?

ಇ. ಬಸವನಬಾಗೇವಾಡಿ ವಿಧಾನಸಭಾ ಕ್ಷೇತ್ರದ ಇಂಗಳೇಶ್ವರ ರಾಮೇಶ್ವರ ದೇವಸ್ಥಾನ, ಮುತ್ತಗಿಯ ಗೌರಿಬಾವಿ ಹಾಗೂ ದೇವಸ್ಥಾನ, ಉಪ್ಪಲದಿನ್ನಿ ಸಂಗಮೇಶ್ವರ ದೇವಸ್ಥಾನ, ಕಾಕಂಡಕಿ ಮಹಿಪತಿ ದಾಸರ ದೇವಸ್ಥಾನ, ತರಣಹರಳಯ್ಯನವರ ಗುಂಡ ಹಾಗೂ ಬಬಲಾದಿ ಚಿಕ್ಕಪ್ಪಯ್ಯನವರ ದೇವಸ್ಥಾನಗಳನ್ನು ಪ್ರವಾಸಿ ತಾಣಗಳನ್ನಾಗಿ ಮಾಡುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು)

ಅ. 1. ಬಿಜಾಪುರ ಕ್ಷೇತ್ರ - ಬಿಜಾಪುರ

2. ತಿಕೋಟ ಕ್ಷೇತ್ರ - ತೊರವಿ